ಆತ್ಮೀಯ ಸಂಬಂಧ ಇಟ್ಟುಕೊಳ್ಳಲು ಅವನಿಗೆ ನೆರವಾದದ್ದು ಸಂಗೀತ; ಮಾಲ್ವಿನಾ ವಾನ್ ಮೇಸೆನ್‌ಬಗ್ ಜೊತೆ ಸ್ನೇಹವಾಗುವಲ್ಲಿ ಮುಖ್ಯ ಪಾತ್ರ ವಹಿಸಿದ್ದು ಸಂಗೀತ. ಅವನೇನೋ ಗಾಂಧಿಯವರು ಬೀಥೋವನ್ನನನ್ನು ಮೆಚ್ಚುವಂತೆ ಮಾಡುವಲ್ಲಿ ಸೋತ, ನಿಜ. ಆದರೆ ಬೀಥೋವನ್ ಸಂಗೀತವನ್ನು ಕುರಿತ ಮೆಚ್ಚುಗೆಯೇ ಮೆಡಲೀನ್ ಸ್ಲೇಡ್‌ಳನ್ನು (ನಂತರ ಮೀರಾಬೆಹೆನ್) ರೋಲಾನ ಹತ್ತಿರಕ್ಕೆ ಕರೆದೊಯ್ದದ್ದಲ್ಲದೆ ಗಾಂಧಿಯವರ ಶಿಷ್ಯೆಯಾಗಲೂ ಪ್ರೇರೇಪಿಸಿತು.

ರೋಲಾನ ಪ್ರಕಾರ ಅವ್ಯವಸ್ಥೆಯನ್ನು ಸುವ್ಯವಸ್ಥೆಯಾಗಿ ಮಾರ್ಪಡಿಸುವ ಕಲಾತ್ಮಕ ಹೋರಾಟವಿದೆಯಲ್ಲ, ಅದು ಮನುಷ್ಯರು ಸ್ವಯಂನಿಯಂತ್ರಣಕ್ಕಾಗಿ ಹೋರಾಡುವ ನೈತಿಕ ಹೋರಾಟಕ್ಕೆ ಸಮನಾದದ್ದು. ಆದ್ದರಿಂದ ಸಂಗೀತಕೃತಿಯೊಂದು ಒಂದು ನೈತಿಕ ಕ್ರಿಯೆಯಾಗಿರುತ್ತದೆ. ವಾಗ್ಗೇಯಕಾರನಾದವನು ತನ್ನ ಕೃತಿಯಲ್ಲಿ ಸಾಮರಸ್ಯವನ್ನು ಹೇಗೋ ಹಾಗೆ ಸುವ್ಯವಸ್ಥೆಯನ್ನೂ ಸಾಧಿಸುತ್ತಾನೆ ಮತ್ತು ಹಾಗೆ ಸಾಧಿಸಿದ್ದನ್ನು ತನ್ನ ಸಹಬಾಂಧವರಿಗೆ ತಲುಪಿಸುತ್ತಾನೆ. ಆದ್ದರಿಂದಲೇ

